ಕರ್ನಾಟಕ ಉಚ್ಚ ನ್ಯಾಯಾಲಯ

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಅಭಯ್ ಎಸ್. ಓಕಾ

ಮತ್ತು

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎಚ್.ಟಿ. ನರೇಂದ್ರ ಪ್ರಸಾದ್

ಶ್ರೀ ವಿ.ಆರ್. ಬೀಡು ಮತ್ತು ಇತರರು -ವಿರುದ್ಧ ಕರ್ನಾಟಕ ರಾಜ್ಯ ಮತ್ತು ಇತರರು*

ಆಜ್ಞೆ

ನ್ಯಾಯಮೂರ್ತಿ ಶ್ರೀ ಅಭಯ್ ಎಸ್. ಓಕಾ:

ಅರ್ಜಿದಾರರ ಪರ ಮಾನ್ಯ ಹಿರಿಯ ನ್ಯಾಯವಾದಿಗಳ ಮತ್ತು ಮೂರನೆಯ ಪ್ರತ್ಯರ್ಜಿದಾರರ ಪರ ಮಾನ್ಯ ಹಿರಿಯ ನ್ಯಾಯವಾದಿಗಳ ಹಾಗೂ ಒಂದನೆಯ ಮತ್ತು ಎರಡನೆಯ ಪತ್ಯರ್ಜಿದಾರರ ಪರ ಮಾನ್ಯ ಹೆಚ್ಚುವರಿ ಸರ್ಕಾರಿ ನ್ಯಾಯವಾದಿಗಳ ವಾದಗಳನ್ನು ಆಲಿಸಲಾಗಿದೆ.

2. ಈ ಸಾರ್ವಜನಿಕ ಹಿತಾಸಕ್ತಿ ವ್ಯಾಜ್ಯದಲ್ಲಿ ಎತ್ತಲಾದ ವಿವಾದಾಂಶವು, ಮೊದಲನೆಯ ಪ್ರತ್ಯರ್ಜಿದಾರರಾದ ಕರ್ನಾಟಕ ರಾಜ್ಯದ ಸ್ವತ್ತಾಗಿದೆ ಎಂದು ಒಪ್ಪಿಕೊಳ್ಳಲಾಗಿರುವ ಶ್ರೀ ಕಂಠೀರವ ಕ್ರೀಡಾಂಗಣಕ್ಕೆ ಸಂಬಂಧಪಟ್ಟಿರುವುದಾಗಿದೆ.ಒಂದರಿಂದ ಹದಿನೇಳರವರೆಗಿನ ಅರ್ಜಿದಾರರೆಲ್ಲರೂ ಮಾಜಿ ರಾಷ್ಟ್ರೀಯ ಯ ಹಾಗೂ ಅಂತರಾಷ್ಟ್ರೀಯ ಅಥೇಟುಗಳಾಗಿದ್ದು, ಈಗ ಅಥ್ಲೆಟಿಕ್ಸ್ ತರಬೇತುದಾರರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ ಮತ್ತು ಹದಿನೆಂಟರಿಂದ ಐವತ್ತರವರೆಗಿನ ಅರ್ಜಿದಾರರು ರಾಷ್ಟ್ರೀಯ ಯ ಹಾಗೂ ಅಂತರರಾಷ್ಟ್ರೀಯ ಮಟ್ಟದ ಅಥೇಟುಗಳಾಗಿದ್ದಾರೆ.

3. ಸಾರ್ವಜನಿಕ ಹಿತಾಸಕ್ತಿ ವ್ಯಾಜ್ಯ ಸ್ವರೂಪದಲ್ಲಿರುವ ಈ ರಿಟ್ ಅರ್ಜಿಗಳನ್ನು, ಖಾಸಗಿ ನಿಯಮಿತ ಕಂಪನಿಯಾಗಿರುವ ಮೂರನೆಯ ಪ್ರತ್ಯರ್ಜಿದಾರರ ಹೆಸರಿಗೆ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಇವರು ಮಾಡಿಕೊಂಡ 22 ನೇ ಮೇ 2014 ರ ಒಪ್ಪಂದದ ಕಡೆಗೆ ನ್ಯಾಯಾಲಯದ ಗಮನವನ್ನು ಸೆಳೆಯಲು ಸಲ್ಲಿಸಲಾಗಿದೆ.ಸದರಿ ಒಪ್ಪಂದದ ಅಡಿಯಲ್ಲಿ, ಒಂದು ಖಾಸಗಿ ಕ್ಲಬ್ ಆಗಿರುವ ಮೂರನೆಯ ಪ್ರತ್ಯರ್ಜಿದಾರರಿಗೆ ಸದರಿ ಕ್ರೀಡಾಂಗಣವನ್ನು ಬಳಸಲು ಅನುಮತಿ ನೀಡಲಾಗಿತ್ತು.

4. ಕ್ರೀಡಾಂಗಣವನ್ನು ಬಳಸಲು ಮೂರನೇ ಪ್ರತ್ಯರ್ಜಿದಾರರನ್ನು ಅಧಿಕೃತಗೊಳಿಸಿ ಇಂಥ ಒಪ್ಪಂದವನ್ನು ಮಾಡಿಕೊಳ್ಳುವ ಅಧಿಕಾರವನ್ನು ನಿರ್ದೇಶಕರು ಹೊಂದಿಲ್ಲವೆಂಬ ಸಂಗತಿಯ ಹೊರತಾಗಿ, ನ್ಯಾಯಸಮ್ಮತ ಮತ್ತು ಪಾರದರ್ಶಕ ಪ್ರಕ್ರಿಯೆಯನ್ನು ಅನುಸರಿಸದೆ ಇಂಥ ಒಂದು ಪ್ರಮುಖ ಸಾರ್ವಜನಿಕ ಕ್ರೀಡಾಂಗಣವನ್ನು ಪರವಾನಗಿ ಒಪ್ಪಂದವನ್ನು ಮಾಡಿಕೊಳ್ಳುವ ಮೂಲಕ ಮೂರನೇ ಪಕ್ಷಕಾರರಿಗೆ ವಹಿಸಿಕೊಡಲಾಗುವುದಿಲ್ಲವೆಂದು ಸದರಿ ಒಪ್ಪಂದದ ಸಂಬಂಧದಲ್ಲಿ ಆಕ್ಷೇಪಣೆಯನ್ನು ಎತ್ತಲಾಗಿದೆ.2017 ರಲ್ಲಿ, ಭಾರತದಲ್ಲಿ ಆಯೋಜಿಸಲಾಗಿದ್ದ 17 ವರ್ಷದೊಳಗಿನವರ ಫಿಫಾ ವಿಶ್ವಕಪ್ ಮುಕ್ತಾಯಗೊಳ್ಳುವ ಅವಧಿವರೆಗೆ ಮಾತ್ರ ಈ ಒಪ್ಪಂದ ಇತ್ತೆಂದು ಗಮನ ಸೆಳೆಯಲಾಗಿದೆ.ಅವಧಿ ಮುಗಿದ ನಂತರ ಸಹಾ, ಮೂರನೆಯ ಪ್ರತ್ಯರ್ಜಿದಾರರು ಕ್ರೀಡಾಂಗಣದ ಸ್ವಾಧೀನವನ್ನು ಮುಂದುವರಿಸಿದೆ ಎಂಬುದು ವಾದವಾಗಿದೆ.

5. ಕ್ರೀಡಾಂಗಣ ನಿರ್ವಹಣಾ ಸಮಿತಿಯ ಕಾರ್ಯದರ್ಶಿಗಳು ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ನಿರ್ದೇಶಕರು, ಮೂರನೆಯ ಪ್ರತ್ಯರ್ಜಿದಾರರಾದ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಗಳಿಗೆ ಬರೆದ 11 ನೇ ಆಗಸ್ಟ್, 2017 ರ ಪತ್ರದೆಡೆಗೆ ನಮ್ಮ ಗಮನವನ್ನು ಸೆಳೆಯಲಾಗಿದ್ದು, ಆ ಪತ್ರದ ಮೂಲಕ, 11 ನೇ ಆಗಸ್ಟ್, 2017 ರಿಂದ 31 ನೇ ಮೇ, 2018 ರವರೆಗೆ, ಎಲ್ಲಾ ರಾಷ್ಟ್ರೀಯ ಹಾಗೂ ಎಎಫ್ಸಿ ಸ್ಪರ್ಧೆ ಫುಟ್ಬಾಲ್ ಪಂದ್ಯಗಳಿಗಾಗಿ ಕ್ರೀಡಾಂಗಣವನ್ನು ಒಂದು ನಿಶ್ಚಿತ ಸ್ಥಳೀಯ ಸ್ಥಳವಾಗಿ ಬಳಸಿಕೊಳ್ಳಲು ಮೂರನೆಯ ಪ್ರತ್ಯರ್ಜಿದಾರನಿಗೆ ಅನುಮತಿಯನ್ನು ನೀಡಲಾಗಿತ್ತು.

6. ರಾಜ್ಯ ಸರ್ಕಾರವು ಸಲ್ಲಿಸಿದ ಆಕ್ಷೇಪಣೆಗಳಲ್ಲಿ, ಮಾನ್ಯ ಸಚಿವರು, ಯುವ ಸಬಲೀಕರಣ ಮತ್ತು ಕ್ರೀಡೆ ಹಾಗೂ ಇತರ ಐವರು ಅಧಿಕಾರಿಗಳನ್ನು ಒಳಗೊಂಡ ಆಡಳಿತ ನಿರ್ವಹಣಾ ಸಮಿತಿಯು ಕ್ರೀಡಾಂಗಣವನ್ನು ನಿರ್ವಹಿಸುತ್ತಿದೆ ಎಂದು ವಾದಿಸಲಾಗಿದೆ.22 ನೇ ಮೇ, 2014 ರ ಪರವಾನಗಿ ಒಪ್ಪಂದವು ಕೊನೆಗೊಂಡಿದೆ ಎಂದು ವಾದಿಸಲಾಗಿದೆ.

7. ಮೂರನೆಯ ಪ್ರತ್ಯರ್ಜಿದಾರರು ಕ್ರೀಡಾಂಗಣದ ಅಭಿವೃದ್ಧಿಗಾಗಿ ಮಾಡಿದ ಪ್ರಯತ್ನಗಳು ಮತ್ತು ಸದರಿ ಕಾಮಗಾರಿ ಕುರಿತು ಸದರಿ ಪ್ರತ್ಯರ್ಜಿದಾರರು ಖರ್ಚು ಮಾಡಿದ ಮೊತ್ತ ಇವುಗಳನ್ನು ನಿರೂಪಿಸಿ ಮೂರನೆಯ ಪ್ರತ್ಯರ್ಜಿದಾರರು ಆಕ್ಷೇಪಣೆಗಳನ್ನು ಮತ್ತು ಹೆಚ್ಚುವರಿ ಆಕ್ಷೇಪಣೆಗಳನ್ನು ಸಲ್ಲಿಸಿದ್ದಾರೆ.ಛಾಯಾಚಿತ್ರಗಳನ್ನು ಸಹ ಲಗತ್ತಿಸಲಾಗಿದೆ.ಮೂರನೆಯ ಪ್ರತ್ಯರ್ಜಿದಾರರು ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಅಥ್ಲೆಟಿಕ್ಸ್ ಮತ್ತು ಇತರ ಚಟುವಟಿಕೆಗಳಿಗೆ ಅಡಚಣೆಯುಂಟು ಮಾಡಿಲ್ಲವೆಂದು ವಾದಿಸಲಾಗಿದೆ.ಅರ್ಜಿದಾರರು ಮಾಡಿದ ವಿವಿಧ ಆರೋಪಗಳನ್ನು ಮೂರನೆ ಪ್ರತ್ಯರ್ಜಿದಾರರು ಸಲ್ಲಿಸಿದ ಹೆಚ್ಚುವರಿ ಆಕ್ಷೇಪಣೆಗಳಲ್ಲಿ ಅಲ್ಲಗಳೆಯಲಾಗಿದೆ.

8. ಕ್ರೀಡಾಂಗಣವು ಸಾರ್ವಜನಿಕ ಆಸ್ತಿ ಎಂಬ ವಿಷಯದಲ್ಲಿ ವಿವಾದವಿಲ್ಲ.ವಿವಿಧ ಪಂದ್ಯಗಳನ್ನು ಆಡಲು ಸಾರ್ವಜನಿಕರಿಗೆ ಸಾಧನವಾಗುವಂತೆ, ಕ್ರೀಡಾಂಗಣವು ಅನೇಕ ಸೌಲಭ್ಯಗಳನ್ನು ಹೊಂದಿದೆ.ಅಥ್ಲೆಟಿಕ್ಸ್ಗಳಿಗೆ ಸಹ ಅಲ್ಲಿ ಸೌಲಭ್ಯಗಳಿವೆ.ಸಾರ್ವಜನಿಕ ಆಸ್ತಿಗೆ ಸಂಬಂಧಿಸಿದ ಕಾನೂನಿಗೆ ಸಂಬಂಧಿಸಿದಂತೆ ಅದನ್ನು ಸಮರ್ಪಕವಾಗಿ ಇತ್ಯರ್ಥಗೊಳಿಸಲಾಗಿದೆ.

9. ಅಖಿಲ ಭಾರತೀಯ ಉಪಭೋಕ್ತಾ ಕಾಂಗ್ರೆಸ್ -ವಿರುದ್ಧ-ಮಧ್ಯಪ್ರದೇಶ ರಾಜ್ಯ ಮತ್ತು ಇತರರು ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯದ ನಿರ್ಣಯಕ್ಕೆ ಸಂಬಂಧಿಸಿದಂತೆ ನಾವು ಒಂದು ಉಪಯುಕ್ತ ಉಲ್ಲೇಖವನ್ನು ಮಾಡಬಹುದಾಗಿದೆ.ಅದರಲ್ಲಿ, ಸರ್ಕಾರವು ಸಾರ್ವಜನಿಕ ಆಸ್ತಿಯ ಟ್ರಸ್ಟಿಯಾಗಿ ಕಾರ್ಯನಿರ್ವಹಿಸಬೇಕು ಹಾಗೂ ನ್ಯಾಯಸಮ್ಮತ ಮತ್ತು ಪಾರದರ್ಶಕ ಪ್ರಕ್ರಿಯೆಯನ್ನು ಅನುಸರಿಸುವ ಮೂಲಕ ಮಾತ್ರವೇ ಸಾರ್ವಜನಿಕ ಆಸ್ತಿಯನ್ನು ವಿಭಜಿಸಬಹುದು ಅಥವಾ ವರ್ಗಾಯಿಸಬಹುದು ಎಂದು ಸರ್ವೋಚ್ಚ ನ್ಯಾಯಾಲಯವು ನಿರ್ಣಯಿಸಿದೆ.ಹಂಚಿಕೆಯ ತರ್ಕಬದ್ಧ ನೀತಿಯನ್ನು ಹೊಂದುವ ಮೂಲಕ ನ್ಯಾಯಸಮ್ಮತ ಮತ್ತು ಪಾರದರ್ಶಕ ಪ್ರಕ್ರಿಯೆಯನ್ನು ಸಾಧಿಸಬಹುದಾಗಿದೆ ಎಂದು ನಿರ್ಣಯಿಸಲಾಗಿದೆ.ಸದರಿ ನಿರ್ಣಯದ 65 ರಿಂದ 68 ರವರೆಗಿನ ಕಂಡಿಕೆಗಳನ್ನು ಈ ಮುಂದಿನಂತೆ ಓದಲಾಗಿದೆ:

" .೦ಾವುದ ಕ್ಕೆ ಪ್ರಾಮುಖ್ಯತೆ ನೀಡುವ ಅವಶ್ಯಕತೆಯಿದೆಯೆಂದರೆ, ರಾಜ್ಯ ಮತ್ತು/ಅಥವಾ ಅದರ ಏಜೆನ್ಸಿಗಳು/ಸಾಧನಗಳು, ರಾಜಕೀಯ ಅಸ್ತಿತ್ವಗಳಿಗೆ ಮತ್ತು/ಅಥವಾ ರಾಜ್ಯದ ಅಧಿಕಾರಿಗಳಿಗೆ ಪ್ರಿಯವಾದ ಹಿತಾಸಕ್ತಿಗಳಿಗೆ ಮತ್ತು ಆಶಯಗಳಿಗೆ ಅನುಸಾರವಾಗಿ ಕೊಡುಗೆ ನೀಡಲು ಅಥವಾ ಲಾಭ ಪ್ರಧಾನ ಮಾಡಲು

ರಾಜ್ಯದ ಯಾರೇ ವ್ಯಕ್ತಿಗೆ ಕೊಡುಗೆ ನೀಡುವಂತಿಲ್ಲ.ರಾಜ್ಯದ ಮತ್ತು/ಅಥವಾ ಅದರ ಏಜೆನ್ಸಿಗಳ/ಸಾಧನಗಳ ಪ್ರತಿಯೊಂದು ಕ್ರಮವು ನಿರ್ಧಾರವು ದೃಢವಾಗಿರಬೇಕು, ಪಾರದರ್ಶಕತೆಯಿಂದ ಕೂಡಿರಬೇಕು, ವಿವೇಚನಾಯುತ ವಾಗಿರಬೇಕು ಮತ್ತು ಉತ್ತಮವಾದ ಸ್ಪಷ್ಟ ಕಾರ್ಯನೀತಿಯನ್ನಾಧರಿಸಿರಬೇಕು ಮತ್ತು ಅದನ್ನು ಸರ್ಕಾರಿ ರಾಜ್ಯಪತ್ರದಲ್ಲಿ ಮತ್ತು ಪ್ರಚಾರದ ಇತರೆ ಮಾನ್ಯತೆ ಪಡೆದ ವಿಧಾನಗಳಲ್ಲಿ ಪ್ರಕಟಿಸುವ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸತಕ್ಕದ್ದು ಮತ್ತು ಈ ಕಾರ್ಯನೀತಿಯಿಂದ ಲಾಭ ಪಡೆಯಬೇಕೆಂದು ಉದ್ದೇಶಿಸಿದ ವ್ಯಕ್ತಿಗಳ ವರ್ಗ ಅಥವಾ ಪ್ರವರ್ಗಗಳನ್ನು ಪರಿಗಣಿಸದೆ, ನಿಷ್ಪಕ್ಷಪಾತವಾದ ಮತ್ತು ಕರಾರುಬದ್ಧವಾದ ವಿಧಾನವನ್ನು ಅಳವಡಿಸಿಕೊಳ್ಳುವ ಮೂಲಕ ಇಂತಹ ಕಾರ್ಯನೀತಿಯನ್ನು ಅನುಷ್ಠಾನಗೊಳಿಸತಕ್ಕದ್ದು ಜಾರಿಮಾಡತಕ್ಕದ್ದು.ರಾಜ್ಯವು ಮತ್ತು ಅದರ ಏಜೆನ್ಸಿಗಳ/ಸಾಧನಗಳ ಮೂಲಕ – ಭೂಮಿ ಹಂಚುವಿಕೆ, ಕೋಟಾ ನೀಡಿಕೆ, ಪರವಾನಗಿಗೆ ಅನುಮತಿ ನೀಡುವುದು, ಇತ್ಯಾದಿಗಳಂಥ ಕೊಡುಗೆಗಳ ವಿತರಣೆಯು ನಿಷ್ಪಕ್ಷಪಾತ ಮತ್ತು ನ್ಯಾಯಸಮ್ಮತವಾದ ರೀತಿಯಲ್ಲಿರಬೇಕು ಮತ್ತು ಪಕ್ಷಪಾತ ಅಥವಾ ಸ್ವಜನ ಪಕ್ಷಪಾತದ ಅಂಶವು, ನಿರ್ದಿಷ್ಟ ಕಾರ್ಯನಿರ್ವಾಹಕ ಅಥವಾ ಅಧಿಕಾರಿಗೆ ಪ್ರದತ್ತವಾದ ಯಾವುದೇ ವಿವೇಚನಾಧಿಕಾರವಿದ್ದರೆ, ಅದರ ಚಲಾವಣೆಯ ಮೇಲೆ ಪ್ರಭಾವ ಬೀರತಕ್ಕದ್ದಲ್ಲ;

66. ರಾಜ್ಯ ಅಥವಾ ಅದರ ಏಜೆನ್ಸಿಯ/ಸಾಧನಗಳ ಮೂಲಕ ಆಹ್ವಾನಿಸಲಾಗುವ ಅಥವಾ ಜಾಹೀರಾತು ನೀಡಲಾಗುವುದನ್ನು ಹೊರತುಪಡಿಸಿ, ವ್ಯಕ್ತಿಗಳು, ನಿಕಾಯಗಳು, ಸಂಘಟನೆಗಳು ಅಥವಾ ಸಂಸ್ಥೆಗಳು ಸಲ್ಲಿಸುವ ಅರ್ಜಿಗಳ ಆಧಾರದ ಮೇಲೆ, ಭೂಮಿ ಹಂಚಿಕೆಯಲ್ಲಿ ತಾರ್ಕಿಕ ಕಾರ್ಯನೀತಿಗಿಂತ ಕಡಿಮೆಯದಾದ ಇನ್ನಾವುದೇ ಕಾರ್ಯನೀತಿ ಇರಲಾರದೆಂಬುದು ನಮ್ಮ ಅನಿಸಿಕೆ.ಭೂಮಿ ಹಂಚಿಕೆಗಾಗಿ ಅಥವಾ ಯಾವುದೇ ಇತರ ರೀತಿಯ ಕೊಡುಗೆಗಳಿಗಾಗಿ, ವ್ಯಕ್ತಿಗಳು, ಸಂಘಟನೆಗಳು ಅಥವಾ ಸಂಸ್ಥೆಗಳು ಸಲ್ಲಿಸುವ ಅರ್ಜಿಗಳನ್ನು ಪರಿಷ್ಕರಿಸುವ ಮೂಲಕ ರಾಜ್ಯವು ಕ್ಷೇಮಿಗಾಗಿ ಸ್ಪರ್ಧಿಸಲು ಅರ್ಜಿ ಸಲ್ಲಿಸಲು ಅರ್ಹವಾಗಿರುವ ಇತರ ವ್ಯಕ್ತಿಗಳನ್ನು ಹೊರಗಿಡಲಾಗದು.ಅನುಷ್ಠಾನವನ್ನು ಖಾಸಗಿ ಕೆಲಸವೆಬಂತೆ ಪರಿಗಣಿಸಿ, ರಾಜ್ಯವು ಅಥವಾ ಅದರ ಏಜೆನ್ಸಿಗಳು/ಮಾಧ್ಯಮಗಳು ಯಾವುದೇ ಭೂಮಿ ಹಂಚಿಕೆ ಅಥವಾ ಕೊಡುಗೆ ರೂಪದ ಇತರ ಮಂಜೂರಾತಿ ನೀಡುವುದು, ಸಂವಿಧಾನದ 14 ನೇ ಅನುಚ್ಛೇದದಲ್ಲಿ ಉದ್ದೇಶಿಸಿದ ಸಮಾನತೆಯ ಖಂಡದ ಆಶಯವನ್ನೇ ಉಲ್ಲಂಘಿಸಿ ನಿರಂಕುಶ ತಾರತಮ್ಯದಿಂದ ಕೂಡಿದ ಮತ್ತು ಪಕ್ಷಪಾತ ಮತ್ತು/ಅಥವಾ ಸ್ವಜನ ಪಕ್ಷಪಾತದ ಕೃತ್ಯವೆಂದು ಪರಿಗಣಿಸುವುದಕ್ಕೆ ಗುರಿಯಾಗುತ್ತದೆ.

67. ಆದಾಗ್ಯೂ, ಶೈಕ್ಷಣಿಕ, ಸಾಂಸ್ಕೃತಿಕ ಸಾಮಾಜಿಕ ಅಥವಾ ಲೋಕೋಪಕಾರಿ ಕಾರ್ಯಚಟುವಟಿಕೆಗಳಲ್ಲಿ ತೊಡಗಿರುವ ಅಥವಾ ಹರಾಜಿನ ಮೂಲಕ ಹೊರತುಪಡಿಸಿ ಇನ್ನಾವುದೇ ರೀತಿಯಲ್ಲಿ ಸಮಾಜಕ್ಕೆ ಸೇವೆ ಸಲ್ಲಿಸುತ್ತಿರುವಂಥ ಸಂಸ್ಥೆಗಳಿಗೆ/ಸಂಘಟನೆಗಳಿಗೆ ರಾಜ್ಯವು ಎಂದೂ ಭೂಮಿಯನ್ನು ಹಂಚಿಕೆ ಮಾಡುವುದಿಲ್ಲ ಎಂಬ ಅರ್ಥವನ್ನು ಇದು ನೀಡುವುದಿಲ್ಲ.ಏನೇ ಆದರೂ, ಅಂಥ ಯಾವುದೇ ಅಂಥ ಕಾರ್ಯಚಟುವಟಿಕೆಗಳಲ್ಲಿ ತೊಡಗಿರುವ ಸಂಸ್ಥೆಗಳಿಗೆ/ಸಂಘಟನೆಗಳಿಗೆ ಹಂಚಿಕೆಗಾಗಿ ಒಮ್ಮೆ ಭೂಮಿಯ ಭಾಗವನ್ನು ಮೀಸಲಿಟ್ಟರೆ ಅಥವಾ ಗುರುತಿಸಿದರೆ, ಹಂಚಿಕೆಯ ವಾಸ್ತವ ಕಾರ್ಯವನ್ನು ಸಮಾನತಾ ಸಿದ್ಧಾಂತದೊಂದಿಗೆ ಸುಸಂಗತವಾಗಿರುವ ರೀತಿಯಲ್ಲಿ ಮಾಡತಕ್ಕದ್ದು ಎಂಬುದನ್ನು ಗಮನಿಸುವುದು ಅವಶ್ಯಕವಾಗಿರುತ್ತದೆ.ಸಹಜವಾಗಿಯೇ, ಹರಾಜು ಪ್ರಕ್ರಿಯೆಯ ಮೂಲಕವಾಗಲಿ ಅಥವಾ ಅನ್ಯಥಾ ರೀತಿಯಲ್ಲಾಗಲಿ ಹಂಚಿಕೆ ಪ್ರಕ್ರಿಯೆಯಲ್ಲಿ ಭಾಗವಹಿಸಲು, ಒಂದೇ ಸ್ಥಳದಲ್ಲಿರುವ ಎಲ್ಲಾ ಅರ್ಹ ವ್ಯಕ್ತಿಗಳಿಗೆ/ಸಂಸ್ಥೆಗಳಿಗೆ/ಸಂಘಗಳಿಗೆ ಸಾಧ್ಯವಾಗುವಂತೆ ಮಾಡಲು ಸಕ್ಷಮ ಪ್ರಾಧಿಕಾರವು, ಅರ್ಹತೆಯ

ಷರತ್ತುಗಳನ್ನು ಅದರಲ್ಲಿ ಸೇರಿಸಿ ಒಂದು ಜಾಹೀರಾತನ್ನು ಹೊರಡಿಸತಕ್ಕದ್ದು.ಪ್ರಸ್ತುತ ಸಂದರ್ಭದಲ್ಲಿ, ಸರ್ಕಾರವು ನಿಗದಿತ ಬೆಲೆಗೆ ಭೂಮಿಯನ್ನು ಹಂಚಿಕೆ ಮಾಡಬಹುದಾದರೂ, ಆ ಸಂದರ್ಭದಲ್ಲೂ ಸಹ ಸಂವಿಧಾನದ 14 ನೇ ಅನುಚ್ಛೇದಕ್ಕೆ ಸುಸ ೦ ಗತವಾಗಿರುವ ವಿವೇಕಯುತ ಪ್ರಕ್ರಿಯೆ ಮೂಲಕ ಹಂಚಿಕೆ ಕಾರ್ಯವನ್ನು ಕೈಗೊಳ್ಳತಕ್ಕದ್ದು.

68. ರಾಜ್ಯವು ಅಥವಾ ಅದರ ಏಜೆನ್ಸಿಗಳ/ಸಾಧನಗಳ ಮೂಲಕ ಒಂದು ನಿಕಾಯಕ್ಕೆ/ಸಂಘಟನೆಗೆ/ಸಂಸ್ಥೆಗೆ ಇವುಗಳಲ್ಲಿ ಯಾವುದು ಜಾತಿ, ಸಮುದಾಯ ಅಥವಾ ಧರ್ಮದ ಹೆಸರನ್ನು ಹೊಂದಿರುತ್ತದೆಯೋ ಅದಕ್ಕೆ ಭೂಮಿ ಹಂಚಿಕೆ ಮಾಡುವುದು, ಜಾತ್ಯಾತೀತ ಪ್ರಜಾಪ್ರಭುತ್ವದ ಗಣರಾಜ್ಯದ ಪರಿಕಲ್ಪನೆಗೆ ವಿರುದ್ಧವಾದುದಷ್ಟೇ ಅಲ್ಲದೆ, ಅದು ಜಾತಿ ಅಥವಾ ಸಮುದಾಯದ ಹೆಸರಿನಲ್ಲಿ ಸಮಾಜವನ್ನು ವಿಭಜಿಸುವ ಗಂಭೀರ ಅಪಾಯದಿಂದ ಸಹ ಕೂಡಿರುತ್ತದೆ.ರಾಜಕೀಯ ಪರಿಗಣನೆಗಳ ಆಧಾರದ ಮೇಲೆ ಅಥವಾ ಪಕ್ಷಪಾತ ಮತ್ತು/ಅಥವಾ ಸ್ವಜನ ಪಕ್ಷಪಾತ ಅಥವಾ ಭವಿಷ್ಯದ ಮತ ಬ್ಯಾಂಕುಗಳನ್ನು ಪೋಷಿಸುವ ದೃಷ್ಟಿಯಿಂದ ಅಂಥ ನಿಕಾಯಗಳಿಗೆ/ಸಂಘಟನೆಗಳಿಗೆ/ಸಂಸ್ಥೆಗಳಿಗೆ ಭೂಮಿಯನ್ನು ಹಂಚಿಕೆ ಮಾಡಲು ಸಂವಿಧಾನತ್ಮಕವಾಗಿ ಅನುಮತೀಯವೂ ಆಗಿರುವುದಿಲ್ಲ.

(ಒತ್ತು ನೀಡಲಾಗಿದೆ)

10. ಪ್ರಸ್ತುತ ಮೊಕದ್ದಮೆಯಲ್ಲಿ, ನಿರ್ದೇಶಕರು ಒಪ್ಪಂದವನ್ನು ಜಾರಿಗೊಳಿಸಲು ಅಧಿಕಾರ ಹೊಂದಿರಲಿಲ್ಲ ಎಂಬ ವಾದದ ಹೊರತಾಗಿ, ರಾಜ್ಯವು ಸಲ್ಲಿಸಿದ ಆಕ್ಷೇಪಣೆಗಳಲ್ಲಿ ತೆಗೆದುಕೊಂಡ ನಿಲುವು ಬಹಳ ವಿಚಿತ್ರವಾದುದಾಗಿದೆ.ಗೃಹ ಸಚಿವರು ಮುಖ್ಯಸ್ಥರಾಗಿರುವ ಕ್ರೀಡಾಂಗಣ ಸಮಿತಿಯು ಕ್ರೀಡಾಂಗಣ ನಿರ್ವಹಣೆಗಾಗಿ ಆಡಳಿತ ನಿವಾಹಣಾ ಸಮಿತಿಯನ್ನು ನೇಮಕ ಮಾಡಲಾಯಿತು ಎನ್ನುವುದಾಗಿದೆ.ಇದು ಸರ್ಕಾರಿ ಅಧಿಕಾರಿಗಳನ್ನು ಮತ್ತು ಪೌರಸಭೆಯ ಆಯುಕ್ತರನ್ನು ಒಳಗೊಂಡಿದೆ.ಮೂರನೆಯ ಪ್ರತ್ಯರ್ಜಿದಾರರ ಜೊತೆಗೆ ಒಪ್ಪಂದ ಮಾಡಿಕೊಳ್ಳುವ ನಿರ್ಧಾರ ತೆಗೆದುಕೊಳ್ಳಲು ಸಮಿತಿಯು ಯಾವ ಕಾನೂನು ಅಧಿಕಾರವನ್ನು ಹೊಂದಿದೆ ಎಂಬುದನ್ನು ಅರ್ಥಮಾಡಿಕೊಳ್ಳಲು ನಾವು ವಿಫಲರಾಗಿದ್ದೇವೆ.ಒಪ್ಪಿಕೊಂಡಂತೆ, ಒಪ್ಪಂದ ಮಾಡಿಕೊಳ್ಳುವ ಮೊದಲು ನ್ಯಾಯಯುತ ಮತ್ತು ಪಾರದರ್ಶಕ ಪ್ರಕ್ರಿಯೆಯನ್ನು ಅನುಸರಿಸಲಾಗಿಲ್ಲ, ಸಾರ್ವಜನಿಕ ನೋಟೀಸನ್ನು ನೀಡಲಾಗಿಲ್ಲ ಮತ್ತು ಇತರ ಸಂಘಟನೆಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿಲ್ಲ.ಕ್ರೀಡಾಂಗಣದ ಅಭಿವೃದ್ಧಿಗಾಗಿ ಮೂರನೆಯ ಪ್ರತ್ಯರ್ಜಿದಾರರು ದೊಡ್ಡ ಮೊತ್ತವನ್ನು ವೆಚ್ಚ ಮಾಡಿದ್ದಾರೆ ಎಂಬ ಚ ನಿಲುವಿನ ಹೊರತಾಗಿಯೂ, ಅದನ್ನು ಸತ್ಯವೆಂದು ಭಾವಿಸಿದಾಗ್ಯೂ, ಈ ಅಂಶವಲ್ಲದೆ ಮೂರನೆಯ ಪ್ರತ್ಯರ್ಜಿದಾರರ ಜೊತೆ ಸ್ಪರ್ಧಿಸಲು ಇತರ ಯಾವುದೇ ಸಂಸ್ಥೆಗೆ ಅವಕಾಶ ನೀಡಿಲ್ಲವೆಂಬ ಅಂಶವು ಜೊತೆಯಲ್ಲಿದೆ.ರಾಜ್ಯವು ನ್ಯಾಯಯುತ ಮತ್ತು ಪಾರದರ್ಶಕ ಪ್ರಕ್ರಿಯೆಯನ್ನು ಅನುಸರಿಸಿದ್ದರೆ, ಮೂರನೆಯ ಪ್ರತ್ಯರ್ಜಿದಾರರು ಮಾಡಿರುವುದಕ್ಕಿಂತ ಉತ್ತಮ ಕಾರ್ಯವನ್ನು ಬೇರೆ ಇನ್ನೊಂದು ಸಂಸ್ಥೆಯು ಸಹ ಮಾಡಿರಬಹುದಾಗಿತ್ತು.

11. ಈಗ, ಪರವಾನಗಿ ಒಪ್ಪಂದವು ಅಂತ್ಯಗೊಂಡಿದೆ ಎಂಬುದನ್ನು ಒಪ್ಪಿಕೊಳ್ಳಲಾಗಿದೆ.ವಾಸ್ತವವಾಗಿ, 21 ನೇ ಏಪ್ರಿಲ್ 2017 ರ ಪತ್ರವನ್ನು ಮೂರನೇ ಪ್ರತ್ಯರ್ಜಿದಾರರು, ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರನ್ನು ಉದ್ದೇಶಿಸಿ ಬರೆದಿದ್ದು, ಅದರಲ್ಲಿ 31 ನೇ ಮೇ, 2017 ರಂದು ಒಪ್ಪಂದವು ಅಂತ್ಯವಾಗುತ್ತದೆ ಎಂಬ ಅಂಶವನ್ನು ಒಪ್ಪಿಕೊಳ್ಳಲಾಗಿದೆ.ಸದರಿ ಪತ್ರದ ಮೂಲಕ, ಮೂರನೆಯ

ಪ್ರತ್ಯರ್ಜಿದಾರರು ವಿಸ್ತರಣೆಯನ್ನು ಕೋರಿದ್ದಾರೆ.ಒಪ್ಪಂದವು 31 ನೇ ಮೇ, 2017 ರಂದು ಕೊನೆಗೊಂಡಿದ್ದಾಗ್ಯೂ 11 ನೇ ಆಗಸ್ಟ್ 2017 ರಂದು, ರಾಷ್ಟ್ರೀಯ ಮತ್ತು ಎಎಫ್ಸಿ ಸ್ಪರ್ಧೆಯ ಫುಟ್ಬಾಲ್ ಪಂದ್ಯಗಳಿಗಾಗಿ, 11 ನೇ ಆಗಸ್ಟ್ 2017 ರಿಂದ 31 ನೇ ಮೇ, 2018 ರವರೆಗಿನ ಸುದೀರ್ಘ ಅವಧಿಗೆ ಸ್ವಂತ ಸ್ಥಳದ ಹಾಗೆ ಕ್ರೀಡಾಂಗಣವನ್ನು ಬಳಸಿಕೊಳ್ಳಲು ಮೂರನೇ ಪ್ರತ್ಯರ್ಜಿದಾರರಿಗೆ ಕ್ರೀಡಾಂಗಣ ನಿರ್ವಹಣಾ ಸಮಿತಿಯ ಕಾರ್ಯದರ್ಶಿಗಳು ಅನುಮತಿ ನೀಡಿದ್ದಾರೆ.ಇಲ್ಲಿ ಪುನಃ ನ್ಯಾಯಯುತ ಮತ್ತು ಪಾರದರ್ಶಕ ವಿಧಾನವನ್ನು ಅನುಸರಿಸದೆ, ಎಂಟು ತಿಂಗಳುಗಳ ಅವಧಿಯವರೆಗೆ ಕ್ರೀಡಾಂಗಣವನ್ನು ಬಳಸಿಕೊಳ್ಳಲು ಮೂರನೆಯ ಪ್ರತ್ಯರ್ಜಿದಾರರಿಗೆ ಅನುಮತಿ ನೀಡಲಾಗಿದೆ.ಇದಲ್ಲದೆ, ಎಂಟು ತಿಂಗಳುಗಳ ಅಂಥ ದೀರ್ಘ ಅವಧಿಯವರೆಗೆ ಕ್ರೀಡಾಂಗಣವನ್ನು ಬಳಸಿಕೊಳ್ಳಲು ಮೂರನೇಯ ಪ್ರತ್ಯರ್ಜಿದಾರರಿಗೆ ಅವಕಾಶ ಮಾಡಿಕೊಟ್ಟಿರುವ ನಿಬಂಧನೆಗಳನ್ನು ಮತ್ತು ಷರತ್ತುಗಳನ್ನು ಕುರಿತು ಸ್ಪಷ್ಟಪಡಿಸಿರುವುದಿಲ್ಲ.ನಿಬಂಧನೆಗಳು ಮತ್ತು ಷರತ್ತುಗಳನ್ನು ವಿಧಿಸದೆ ಎಂಟು ತಿಂಗಳುಗಳ ಸುದೀರ್ಘ ಅವಧಿಯವರೆಗೆ ಕ್ರೀಡಾಂಗಣವನ್ನು ಬಳಸಲು ಮೂರನೆಯ ಪ್ರತ್ಯರ್ಜಿದಾರರಿಗೆ ಅವಕಾಶ ನೀಡಲು ಕ್ರೀಡಾಂಗಣ ನಿರ್ವಹಣಾ ಸಮಿತಿಯ ಕಾರ್ಯದರ್ಶಿಗಳಿಗೆ ಯಾವ ಅಧಿಕಾರವಿದೆ ಎಂಬುದು ಸಹ ಸ್ಪಷ್ಟವಿಲ್ಲ.

12. ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಕಾರ್ಯದರ್ಶಿಗಳು ಬರೆದ 3 ನೇ ಜುಲೈ, 2019 ರ ಪತ್ರವನ್ನು, ಮಾನ್ಯ ಹೆಚ್ಚುವರಿ ಸರ್ಕಾರಿ ವಕೀಲರು ಸಲ್ಲಿಸಿದ್ದು, ಅದರಲ್ಲಿ ಇನ್ನು ಮುಂದೆ ನ್ಯಾಯಯುತ ಮತ್ತು ಪಾರದರ್ಶಕ ಪ್ರಕ್ರಿಯೆಯನ್ನು ಅನುಸರಿಸಿದ ನಂತರ ಮಾತ್ರವೇ ಮೂರನೇ ಪಕ್ಷಕಾರರಿಗೆ ಕ್ರೀಡಾಂಗಣವನ್ನು ಬಳಸಲು ಅನುಮತಿ ನೀಡಲಾಗುವುದು ಎಂಬ ಭರವಸೆಯನ್ನು ನೀಡಲಾಗಿದೆ.ರಾಜ್ಯವು ನೀಡಿದ ಸದರಿ ಭರವಸೆಯನ್ನು ನಾವು ಒಪ್ಪಿಕೊಳ್ಳುತ್ತೇವೆ.

13. ರಾಜ್ಯ ಸರ್ಕಾರ ಮತ್ತು ಮೂರನೆಯ ಪ್ರತ್ಯರ್ಜಿದಾರರ ನಡುವಿನ ಒಪ್ಪಂದವು ಈಗ ಕೊನೆಗೊಂಡಿರುವುದರಿಂದ, ಪರಿಹಾರ ನೀಡುವ ಅವಶ್ಯಕತೆ ಇಲ್ಲದಿದ್ದಾಗ್ಯೂ, 22 ನೇ ಮೇ, 2014 ರ ಒಪ್ಪಂದವನ್ನು ಕಾರ್ಯಗತಗೊಳಿಸುವ ಮೂಲಕ ಹಾಗೂ ತದನಂತರ, 11 ನೇ ಆಗಸ್ಟ್ 2017 ರ ಅನುಮತಿಯನ್ನು ನೀಡುವ ಮೂಲಕ, ಮೂರನೆಯ ಪ್ರತ್ಯರ್ಜಿದಾರರು ಸಾರ್ವಜನಿಕ ಆಸ್ತಿಯನ್ನು ಬಳಸಲು ಅನುಮತಿ ನೀಡಲಾಗಿರುವ ವಿಧಾನದ ಬಗ್ಗೆ ರಾಜ್ಯ ಸರ್ಕಾರವು ಖಂಡಿತವಾಗಿಯೂ ವಿಚಾರಣೆ ನಡೆಸಬೇಕಾಗುತ್ತದೆ.

14. ಈ ಹಂತದಲ್ಲಿ, ಕ್ರಿಶನ್ ಲಾಲ್ ಗೆರಾ -ವಿರುದ್ಧ ಹರಿಯಾಣ ರಾಜ್ಯ ಮತ್ತು ಇತರರು ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯದ ನಿರ್ಣಯವನ್ನು ಚ ನಾವು ಉಲ್ಲೇಖಿಸಬಹುದಾಗಿದ್ದು, ಅದರಲ್ಲಿ, ಕ್ರೀಡಾಂಗಣಗಳನ್ನು ಸೃಷ್ಟಿಸುವುದು ಮತ್ತು ಕ್ರೀಡೆಗಳಿಗೆ ಪ್ರೋತ್ಸಾಹ ನೀಡುವುದು ರಾಜ್ಯ ಸರ್ಕಾರದ ಪ್ರಕಾರ್ಯವಾಗಿರುವ ಮಾನವ ಸಂಪನ್ಮೂಲ ಅಭಿವೃದ್ಧಿಯ ಒಂದು ಭಾಗವಾಗಿದೆ ಎಂದು ಸರ್ವೋಚ್ಚ ಚ ನ್ಯಾಯಾಲಯವು ಅಭಿಪ್ರಾಯಪಟ್ಟಿದೆ.ಕ್ರೀಡಾಂಗಣದ/ಮೈದಾನದ ಯಾವುದೇ ಭಾಗವನ್ನು ಖಾಸಗಿ ಉದ್ಯಮಿಗಳು ನಡೆಸಬೇಕೆಂದು ಅನುಮತಿ ನೀಡಲಾಗುವುದಿಲ್ಲವೆಂದು ಸರ್ವೋಚ್ಚ ನ್ಯಾಯಾಲಯವು ನಿರ್ಣಯಿಸಿದೆ.ಸಾರ್ವಜನಿಕರು ಕ್ರೀಡಾಂಗಣ ಹಾಗೂ ಅದರಲ್ಲಿ ಸೃಜಿಸಲಾದ ಆಧುನಿಕ ಸೌಲಭ್ಯಗಳ ಲಾಭವನ್ನು ಪಡೆಯುವಂತಾಗಲು ಮೂರನೇ ಪಕ್ಷಕಾರರ ಮೂಲಕ ಸದರಿ ಕ್ರೀಡಾಂಗಣದ ಬಳಕೆಗಾಗಿ ಒಂದು ಸೂಕ್ತ ಕಾರ್ಯನೀತಿಯನ್ನು ರಾಜ್ಯ ಸರ್ಕಾರವು ರೂಪಿಸಬೇಕಾಗುತ್ತದೆ.

15. ಅಖಿಲ ಭಾರತೀಯ ಉಪಭೋಕ್ತಾ ಕಾಂಗ್ರೆಸ್ (ಮೇಲೆ ತಿಳಿಸಲಾದ) ಮೊಕದ್ದಮೆಯಲ್ಲಿ, ಸರ್ವೋಚ್ಚ ನ್ಯಾಯಾಲಯವು ಅಭಿಪ್ರಾಯಪಟ್ಟಂತೆ, ರಾಜ್ಯ ಚ ಸರ್ಕಾರವು ಹರಾಜನ್ನು ಮಾತ್ರ ನಡೆಸಬೇಕೆಂದು ನಾವು ಸಲಹೆ ನೀಡುತ್ತಿಲ್ಲ.ಆದಾಗ್ಯೂ, ಒಂದು ತಾರ್ಕಿಕ ನೀತಿಯನ್ನು ರೂಪಿಸಿದ ನಂತರ, ಸರ್ವೋಚ್ಚ ಚ ನ್ಯಾಯಾಲಯದ ನಿರ್ಣಯದ 67 ನೇ ಕಂಡಿಕೆಯಲ್ಲಿ, ಸದರಿ ನಿರ್ಣಯವು ಪದ್ಯಾಲೋಚಿಸಿದ ಕಾರ್ಯವಿಧಾನವನ್ನು ರಾಜ್ಯ ಸರ್ಕಾರವು ಅನುಸರಿಸಬೇಕು.

16. ತದನುಸಾರವಾಗಿ, ಈ ಮುಂದಿನ ಆದೇಶವನ್ನು ಹೊರಡಿಸುವ ಮೂಲಕ ಅರ್ಜಿಗಳನ್ನು ವಿಲೇ ಮಾಡಿದ್ದೇವೆ:

(ಎ) ಮೂರನೇ ಪ್ರತ್ಯರ್ಜಿದಾರರಿಗೆ 22 ನೇ ಮೇ, 2014 ರ ಪರವಾನಗಿಯನ್ನು ನೀಡಲಾಗಿರುವ ರೀತಿಗೆ ಸಂಬಂಧಿಸಿದಂತೆ ಮತ್ತು 11 ನೇ ಆಗಸ್ಟ್ 2017 ರಿಂದ 31 ನೇ ಮೇ, 2018 ರ ನಡುವಿನ ಅವಧಿಗಾಗಿ ಕ್ರೀಡಾಂಗಣವನ್ನು ಬಳಸಲು ಮೂರನೇ ಪತ್ಯರ್ಜಿದಾರರಿಗೆ ಅನುಮತಿ ನೀಡಲಾದ ರೀತಿಗೆ ಸಂಬಂಧಿಸಿದಂತೆ ವಿಚಾರಣೆ ನಡೆಸುವಂತೆ ನಾವು ರಾಜ್ಯ ಸರ್ಕಾರದ ಸೂಕ್ತ ಪ್ರಾಧಿಕಾರಕ್ಕೆ ನಿರ್ದೇಶಿಸುತ್ತೇವೆ.ರಾಜ್ಯ ಸರ್ಕಾರವು, ಕಾನೂನಿಗೆ ಅನುಸಾರವಾದ ಕ್ರಮಗಳನ್ನು ತೆಗೆದುಕೊಳ್ಳುವ ಮತ್ತು ಕ್ರಮವನ್ನು ಪ್ರಾರಂಭಿಸುವ ಎರಡರ ಕಾನೂನುಸಮ್ಮತತೆಯನ್ನು ಪರಿಶೀಲಿಸತಕ್ಕದ್ದು;

(ಬಿ) ಈ ತೀರ್ಪಿನಲ್ಲಿ, ಈ ನ್ಯಾಯಾಲಯವು ನೀಡಿ ವಿಧಿಸಿದ ಕಾನೂನಿನ ಸಂಗತಿಗಳ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರವು ವಿಚಾರಣೆಯನ್ನು ನಡೆಸತಕ್ಕದ್ದು;

(ಸಿ) ನ್ಯಾಯಯುತ ಮತ್ತು ಪಾರದರ್ಶಕ ಪ್ರಕ್ರಿಯೆಯನ್ನು ಅನುಸರಿಸದೆ, ಕ್ರೀಡಾಂಗಣ ಬಳಸಲು ಮೂರನೇಯ ಪತ್ಯರ್ಜಿದಾರರಿಗೆ ಅವಕಾಶ ನೀಡುವ ಮೂಲಕ, ಅಕ್ರಮದಲ್ಲಿ ತೊಡಗಿರುವವರ ವಿರುದ್ಧ ರಾಜ್ಯ ಸರ್ಕಾರವು ಕ್ರಮ ಕೈಗೊಳ್ಳತಕ್ಕದ್ದು ಎಂದು ಇಲ್ಲಿ ಹೇಳುವ ಅಗತ್ಯವಿಲ್ಲ;

(ಡಿ) ನಾವು ಈ ಅರ್ಜಿಗಳನ್ನು ವಿಲೇ ಮಾಡುತ್ತಿದ್ದಾಗ್ಯೂ, ಈ ನಿರ್ದೇಶನಗಳೊಂದಿಗೆ ಕೈಗೊಂಡ ಕ್ರಮಗಳ ಬಗ್ಗೆ ವರದಿ ಮಾಡಲು 14 ನೇ ಅಕ್ಟೋಬರ್ 2019 ರಂದು ವಿಲೇ ಮಾಡಲಾದ ಅರ್ಜಿಗಳನ್ನು ಪಟ್ಟಿ ಮಾಡತಕ್ಕದ್ದು;

(ಇ) ನ್ಯಾಯಯುತ ಹಾಗೂ ಪಾರದರ್ಶಕ ಪ್ರಕ್ರಿಯೆಯನ್ನು ಅನುಸರಿಸದೆ, ಕ್ರೀಡಾಂಗಣವನ್ನು ಸ್ವಾಧೀನಕ್ಕೆ ಪಡೆಯತಕ್ಕದ್ದಲ್ಲ ಅಥವಾ ಅದರ ಯಾವುದೇ ಭಾಗವನ್ನು ಬೇರ್ಪಡಿಸತಕ್ಕದ್ದಲ್ಲ ಅಥವಾ ಪೂರ್ವಾಧಿ ಹೊಂದತಕ್ಕದ್ದಲ್ಲ ಎಂದು ರಾಜ್ಯ ಸರ್ಕಾರವು ನೀಡಿದ ಭರವಸೆಯನ್ನು ನಾವು ಒಪ್ಪಿಕೊಳ್ಳುತ್ತೇವೆ;

(ಎಫ್) ಸರ್ವೋಚ್ಚ ನ್ಯಾಯಾಲಯವು ವಿಧಿಸಿದ ನಿಯಮಗಳ ಚ ಸಂದರ್ಭದಲ್ಲಿ, ಕ್ರೀಡಾಂಗಣ ಮತ್ತು ಅದರ ಬಳಕೆಗೆ 0 ಸಂಬಂಧಿಸಿದಂತೆ ವ್ಯವಹರಿಸುವ ಒಂದು ಕಾರ್ಯನೀತಿಯನ್ನು ರೂಪಿಸಲು, ನಾವು ರಾಜ್ಯ ಸರ್ಕಾರಕ್ಕೆ ನಿರ್ದೇಶಿಸುತ್ತೇವೆ. ಈ ನಿರ್ದೇಶನದ ಅನುಪಾಲನೆಯನ್ನು ಸಹ ನ್ಯಾಯಾಲಯಕ್ಕೆ ವರದಿ ಮಾಡತಕ್ಕದ್ದು.

ಇ ತದನುಸಾರವಾಗಿ, ಈ ಮೇಲಿನ ಅಭಿಪ್ರಾಯಗಳು ಹಾಗೂ ನಿರ್ದೇಶನಗಳೊಂದಿಗೆ ಅರ್ಜಿಗಳನ್ನು ವಿಲೆ ಮಾಡಲಾಗಿದೆ;

(ಎಚ್) ರಾಜ್ಯ ಸರ್ಕಾರವು ಅನುಪಾಲನೆಯನ್ನು ವರದಿ ಮಾಡುವುದಕ್ಕಾಗಿ " ಆದೇಶಗಳು " ಎಂಬ ಶೀರ್ಷಿಕೆಯಡಿಯಲ್ಲಿ 14 ನೇ ಅಕ್ಟೋಬರ್ 2019 ರಂದು ವಿಲೆ ಮಾಡಲಾದ ಅರ್ಜಿಗಳನ್ನು ಪಟ್ಟಿ ಮಾಡತಕ್ಕದ್ದು.